ರಿಪೋರ್ಟ್ ಪ್ರಕಾರ ನೋಡಿದರೆ 700ಕ್ಕಿಂತ ಹೆಚ್ಚು ಕೇಸ್‌ಗಳು ಇದ್ದರೆ ಮಾತ್ರ ಟೈಫರ್‌ಕೇಟ್ ಮಾಡಬೇಕೆಂದು ಇದೆ. ಆದರೆ ಈಗ ಇರುವಂತಹ ನಾಲ್ಕು ಪೊಲೀಸ್ ಸ್ಟೇಷನ್‌ಗಳ ಲೆಕ್ಕವನ್ನು ತೆಗೆದುಕೊಂಡಾಗ ಹೆಚ್ಚಿನ ಕೆಲಸದ ಭಾರವಿಲ್ಲ. ಮತ್ತು ಅಲ್ಲಿ ಪೊಲೀಸ್ ಠಾಣೆಯ ಅವಶ್ಯಕತೆ ಇಲ್ಲ ಎಂದು ನಮ್ಮ ಪೊಲೀಸ್ ಇಲಾಖೆಯ ಅಂಕಿಸಂಖ್ಯೆ ಪ್ರಕಾರ ಇವತ್ತು ನಾವು ಹೇಳಬಹುದು. ಆದರೆ ಅವರಿಗೆ ಬೇಕಾದುದು ರಾಜಾನ್ ಕುಂಟೆ ಪೊಲೀಸ್ ಸ್ಟೇಷನ್ ಅನ್ನು ಆಫ್‌ಗ್ರೇಡ್ ಮಾಡಬೇಕೆನ್ನುವ ದೃಷ್ಟಿಯಿಂದ ಅವರು ಪ್ರಶ್ನೆ ಕೇಳಿರಬಹುದು. ಆದರೂ ಕೂಡ ಆ ರಾಜಾನ್‌ಕುಂಟೆ ಪೊಲೀಸ್ ಠಾಣೆಯನ್ನು ಆಪ್‌ಗ್ರೇಡ್ ಮಾಡುವುದರ ಬಗ್ಗೆ ನಾವು ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದೇವೆ. ಅಲ್ಲಿ ಔಟ್‌ಪೋಸ್ಟ್ ಇದೆ, ಅದನ್ನು ಆಫ್‌ಗ್ರೇಡ್ ಮಾಡಬೇಕೆಂದು ಈಗಾಗಲೇ ನಾವು ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಪ್ರೊಪೋಸಲ್ ಕಳುಹಿಸಿದ್ದೇವೆ. ಅಲ್ಲಿ 5ನೇ ಪೊಲೀಸ್ ಸ್ಟೇಷನ್ ಆದರೂ ಕೂಡ ಕೆಲಸ ಬಹಳಷ್ಟು ಇಂಬ್ಯಾಲೆನ್ಸ್ ಆಗುತ್ತದೆ, ಮತ್ತು ಅಲ್ಲಿ ಅಷ್ಟೊಂದು ಅವಶ್ಯಕತೆ ಇಲ್ಲವೆಂದು ಪೊಲೀಸ್ ಇಲಾಖೆಯ ಅಂಕಿಸಂಖ್ಯೆ ಪ್ರಕಾರ ನಾನು ಹೇಳುತ್ತೇನೆ.

ಶ್ರೀ ವಿ. ಕೃಷ್ಣಪ್ಪ: ದೊಡ್ಡಬಳ್ಳಾಪುರ ನಗರದಲ್ಲಿ 74,000 ಪ್ರಜಾಸಂಖ್ಯೆ ಇದೆ. ಅದರಲ್ಲಿ ಅರ್ಧ ಭಾಗದಷ್ಟು ಮಹಿಳೆಯರಿದ್ದಾರೆ, ಅಲ್ಲಿ ಒಬ್ಬರು ಲೇಡಿ ಕಾನ್‌ಸ್ಟೇಬಲ್ ಇಲ್ಲ, ಮೂರು ಜನಕ್ಕೆ ಪ್ರಾವಿಷನ್ ಅದೆ, ಆದರೂ ಕೂಡ ಒಬ್ಬರನ್ನು ಅಲ್ಲಿ ನೇಮಕ ಮಾಡಿಲ್ಲ, ದಯವಿಟ್ಟು, ಗೃಹ ಮಂತ್ರಿಗಳು ಆ ನಗರಕ್ಕೆ ಲೇಡಿ ಕಾನ್‌ಸ್ಟೇಬಲ್‌ಗಳನ್ನು ಇರತಕ್ಕಂತಹ ಪ್ರಾವಿಷನ್‌ನಲ್ಲಿ ಹಾಕಿಕೊಡಬೇಕೆಂದು ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅದನ್ನು ಪರಿಶೀಲಿಸಲಾಗುವುದು.

ಪ್ರಶ್ನೆ ಸಂಖ್ಯೆ 55

ಶ್ರೀ ಎಸ್. ಕುಮಾರ ಬಂಗಾರಪ್ಪ (ಪೌರತಳಿತ ಸಚಿವರು): ಇದು ಕುಡಿಯುವ ನೀರಿಗೆ ಸಂಬಂಧಿಸಿದ್ದು, ಈ ಪ್ರಶ್ನೆ ಮಾನ್ಯ ಮುಖ್ಯಮಂತ್ರಿಗಳಿಗೆ ಅಲ್ಲ. ನಗರಾಭಿವೃದ್ಧಿ ಸಚಿವರಿಗೆ ವರ್ಗಾವಣೆಯಾಗಿದೆ. ಮಾನ್ಯಸದಸ್ಯರು ಮಂತ್ರಿಗಳ ಸಂಖ್ಯೆ ಜಾಸ್ತಿಯಾಗಿದೆ ಯಾರಿಗೆ ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಸಿ. ಬೈರೇಗೌಡ: ಶರೀರದ ಎಷ್ಟು ಭಾಗಗಳಿವೆ ಅಷ್ಟು ಭಾಗಗಳನ್ನಾಗಿ ಒಂದೊಂದು ಇಲಾಖೆಯನ್ನು ಮಾಡಿದರೆ ಇದೇ ತಾಪತ್ರೆಯವಾಗುತ್ತದೆ..... (ಗೊಂದಲ)

ಅಧ್ಯಕ್ಷರು: ನೋ ಕಾಮೆಂಟ್ಸ್, ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಸದಸ್ಯರು ಇತ್ತೀಚೆಗೆ ಹೊಸ ವಿಶ್ಲೇಷಣೆಯನ್ನು ಕೊಡುತ್ತಿದ್ದಾರೆ, ಹಿಂದಿನಿಂದಲೂ ಮುನಿಸಿಪಾಲಿಟಿಸನ್ ಇಬ್ಬರು ಮಂತ್ರಿಗಳಿದ್ದಾರೆ. ಆದುದರಿಂದ ಇದರಲ್ಲಿ ಹೊಸ ವಿಚಾರವೇನೂ ಇಲ್ಲ.

ಶ್ರೀ ಆರಗ ಜ್ಞಾನೇಂದ್ರ: ಮಂತ್ರಿಗಳಿಗೆ ಗೊಂದಲವಾದರೆ ಜನರು ಹೇಗೆ ಅರ್ಥ ಮಾಡಿಕೊಳ್ಳುವುದು

ಶ್ರೀ ಸಿ. ಬೈರೇಗೌಡ: ಮಾನ್ಯ ಮುಖ್ಯಮಂತ್ರಿಗಳೆ, ಮಂತ್ರಿಗಳ ಖಾತೆಗಳ್ಯಾವುವು ಎನ್ನುವ ನೋಟಿಫಿಕೇಷನ್ ಏನಿದೆ ಅದನ್ನು ಮೊದಲು ಎಲ್ಲಾ ಸಚಿವರಿಗೂ ಸರ್ವೆ ಮಾಡಲು ಕ್ರಮ ತೆಗೆದುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಮಂತ್ರಿಗಳು): ಮಾನ್ಯ ಸದಸ್ಯರಿಗೆ ಉತ್ತರವನ್ನು ನಾಳೆ ಒದಗಿಸಿ ಕೊಡುತ್ತೇನೆ.

ಗೊಂದಲ

ಅಧ್ಯಕ್ಷರು: ಈಗ ಉತ್ತರ ಸಿದ್ಧವಾಗಿಲ್ಲ. ಏನು ಮಾಡುವುದಕ್ಕಾಗುತ್ತದೆ? ನಾಳೆ ಉತ್ತರ ಒದಗಿಸಿಕೊಡುತ್ತಾರೆ ಬಿಡಿ.

ರಾಜ್ಯದಲ್ಲಿ ಸ್ವಯಂ ಘೋಷಿತ ಆಸ್ತಿ ತೆರಿಗೆ

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

(28) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆ ವಿಧಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಈ ತೆರಿಗೆ ವಿಚಾರದಲ್ಲಿ ಸಾರ್ವಜನಿಕರಿಂದ ಹಾಗೂ ಜನ ಪ್ರತಿನಿಧಿಗಳಿಂದ ಅಭಿಮತವನ್ನೇನಾದರೂ ಪಡೆಯಲಾಗಿದೆ.

ಇ) ಹಾಗಿದ್ದಲ್ಲಿ, ಈ ಅಭಿಮತಕ್ಕೆ ಮನ್ನಣೆ ನೀಡಿ ತೆರಿಗೆ ಅಂಶಗಳಲ್ಲಿ ಮಾರ್ಪಡು ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು)

ಅ) ಹೌದು

ಆ) ಪಡೆಯಲಾಗಿದೆ.

ಇ) ವಿಷಯವು ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಆತ್ಮಾನಂದ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸ್ವಯಂ ಘೋಷಿತ ಆಸ್ತಿ ತೆರಿಗೆ ವಿಷಯದಲ್ಲಿ ಜನಾಭಿಪ್ರಾಯ ಪಡೆಯಲಾಗಿದ್ದು ಸರ್ಕಾರ ಅದನ್ನು ಪರಿಶೀಲಿಸಲಾಗುವುದೆಂದು ಉತ್ತರಿಸಿದ್ದಾರೆ. ಈ ವಿವಿಧ ವರ್ಗಗಳಿಂದ ಯಾವ್ಯಾವ ಅಂಶಗಳ ಬಗ್ಗೆ ಅವರು ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ನೀಡಿದ್ದಾರೆ, ಮತ್ತು ಸರ್ಕಾರ ಸಾರ್ವಜನಿಕರಿಗೆ ತೊಡಕಾಗಿರುವ ಯಾವ ಅಂಶಗಳನ್ನು ಮಾರ್ಪಾಡು ಮಾಡುವ ಪ್ರಕ್ರಿಯೆಯಲ್ಲಿದೆ ಎನ್ನುವ ವಿಷಯವನ್ನು ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಬಯಸುತ್ತೇನೆ.